## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗಳಲ್ಲಿ ಮಹಿಳಾ ಪೊಲೀಸ್ ಕಂಪನಿಗಳನ್ನು ಸೃಜಿಸುವ ಕುರಿತು.

**ಓದಲಾಗಿದೆ:**

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪತ್ರ ಸಂಖ್ಯೆ: ಪಿ&ಸಿ(5)54/2021-22, ದಿನಾಂಕ: 23/12/2024.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಘಟಕಗಳು ಒಂದು ಪ್ರಹಾರ ದಳವಾಗಿದ್ದು, ಮತೀಯ ಹಾಗೂ ರಾಜಕೀಯ ಗಲಭೆಗಳು, ರೈತರ ಹೋರಾಟ, ವಿದ್ಯಾರ್ಥಿ ಚಳುವಳಿ ಹಾಗೂ ಇನ್ಯಾವುದೇ ಗಲಭೆಗಳನ್ನು ಹತ್ತಿಕ್ಕುವಲ್ಲಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿ ಸಮಾಜದಲ್ಲಿ ಶಾಂತಿಯನ್ನು ಪುನರ್ ಸ್ಥಾಪಿಸುವ ಸಲುವಾಗಿ ಸದಾ ಸಿದ್ಧತೆಯಲ್ಲಿರುವ ಸನ್ನದ ಬಲವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆಂದು ತಿಳಿಸಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಚಳುವಳಿ, ಧರಣಿ ಇನ್ನಿತರೆ ಹೋರಾಟಗಳಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದರಿಂದ ಅವುಗಳನ್ನು ಸಮರ್ಪಕವಾಗಿ ನಿಭಾಯಿಸಲು, ಮಹಿಳಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಅವಶ್ಯಕತೆ ಇರುವುದಾಗಿ ತಿಳಿಸಿ, ಹಾಲಿ 2ನೇ ಪಡೆ, ಕ.ರಾ.ಮೀ.ಪೊ, ಬೆಳಗಾವಿ ಘಟಕದಲ್ಲಿರುವ ಒಂದು ಮಹಿಳಾ ಕಂಪನಿಗಳ ಹುದ್ದೆವಾರು ಮಂಜೂರಾತಿ ಬಲದ ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

| ಕ್ರ ಸಂ | ಹುದ್ದೆ | ಕಂಪನಿ ಸಂಖ್ಯಾ ಬಲ |
|---|---|---|
| 1 | ಮಹಿಳಾ ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ | 01 |
| 2 | ಮಹಿಳಾ ಸ್ಪೆಷಲ್ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ | 04 |
| 3 | ಮಹಿಳಾ ಸ್ಪೆಷಲ್ ರಿಸರ್ವ್ ಸಹಾಯಕ ಸಬ್-ಇನ್ಸ್‌ಪೆಕ್ಟರ್ | 12 |
| 4 | ಮಹಿಳಾ ಸ್ಪೆಷಲ್ ರಿಸರ್ವ್ ಹೆಡ್ ಕಾನ್‌ಸ್ಟೇಬಲ್ | 36 |
| 5 | ಮಹಿಳಾ ಸ್ಪೆಷಲ್ ರಿಸರ್ವ್ ಪೊಲೀಸ್ ಕಾನ್‌ಸ್ಟೇಬಲ್ | 76 |
| 6 | ಅನುಯಾಯಿ | 12 |
| | ಒಟ್ಟು | 141 |

ಮುಂದುವರೆದು, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗಳಲ್ಲಿ ಸ್ಪೆ.ಆರ್.ಪಿ.ಐ (ಪುರುಷ) ಅಧಿಕಾರಿ ಹುದ್ದೆಯಿಂದ ಅನುಯಾಯಿ (ಪುರುಷ) ವೃಂದದ ಬಲಾಬಲದ ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

| ಕ್ರ ಸಂ | ಘಟಕ | ಸ್ಪೆ.ಆರ್‌ಪಿಐ ಮಂಜೂರಾತಿ ಬಲ | ಸ್ಪೆ.ಆರ್ ಎಸ್‌ಐ ಮಂಜೂರಾತಿ ಬಲ | ಸ್ಪೆ.ಎಆರ್ ಎಸ್‌ಐ ಮಂಜೂರಾತಿ ಬಲ | ಸ್ಪೆ.ಆರ್ ಹೆಚ್‌ಸಿ ಮಂಜೂರಾತಿ ಬಲ | ಸ್ಪೆ.ಆರ್ ಪಿಸಿ ಮಂಜೂರಾತಿ ಬಲ | ಅನುಯಾಯಿ ಮಂಜೂರಾತಿ ಬಲ |
|---|---|---|---|---|---|---|---|
| 1 | 5ನೇ ಪಡೆ, ಕ.ರಾ.ಮೀ.ಪೊ, ಮೈಸೂರು | 10 | 22 | 89 | 268 | 565 | 62 |
| 2 | 6ನೇ ಪಡೆ, ಕ.ರಾ.ಮೀ.ಪೊ, ಕಲಬುರಗಿ | 9 | 25 | 90 | 275 | 552 | 67 |

..2)

| | | | | | | | |
|---|---|---|---|---|---|---|---|
| 3 | 7ನೇ ಪಡೆ, ಕ.ರಾ.ಮೀ.ಪೊ, ಮಂಗಳೂರು | 8 | 25 | 82 | 264 | 547 | 75 |
| 4 | 8ನೇ ಪಡೆ, ಕ.ರಾ.ಮೀ.ಪೊ, ಶಿವಮೊಗ್ಗ | 8 | 21 | 82 | 244 | 493 | 70 |
| 5 | 10ನೇ ಪಡೆ, ಕ.ರಾ.ಮೀ.ಪೊ, ಶಿಗ್ಗಾವಿ | 10 | 30 | 109 | 328 | 659 | 94 |
| 6 | 11ನೇ ಪಡೆ, ಕ.ರಾ.ಮೀ.ಪೊ, ಹಾಸನ | 9 | 21 | 86 | 260 | 534 | 72 |
| 7 | 12ನೇ ಪಡೆ, ಕ.ರಾ.ಮೀ.ಪೊ, ತುಮಕೂರು | 9 | 19 | 62 | 213 | 599 | 84 |
| | ಒಟ್ಟು | 63 | 163 | 600 | 1852 | 3949 | 524 |

ಈ ಹಿನ್ನಲೆಯಲ್ಲಿ, ಕಮಾಂಡೆಂಟ್, 5ನೇಪಡೆ, ಕ,ರಾ.ಮೀ.ಪೊ, ಮೈಸೂರು, ಕಮಾಂಡೆಂಟ್, 6ನೇ ಪಡೆ, ಕ.ರಾ.ಮೀ.ಪೊ, ಕಲಬುರಗಿ, ಕಮಾಂಡೆಂಟ್, 7ನೇ ಪಡೆ, ಕ.ರಾ.ಮೀ.ಪೊ, ಮಂಗಳೂರು, ಕಮಾಂಡೆಂಟ್, 8ನೇ ಪಡೆ, ಕ.ರಾ.ಮೀ.ಪೊ, ಶಿವಮೊಗ್ಗ, ಕಮಾಂಡೆಂಟ್, 10ನೇ ಪಡೆ, ಕ.ರಾ.ಮೀ.ಪೊ, ಶಿಗ್ಗಾವಿ, ಕಮಾಂಡೆಂಟ್, 11ನೇ ಪಡೆ, ಕ.ರಾ.ಮೀ.ಪೊ, ಹಾಸನ ಮತ್ತು ಕಮಾಂಡೆಂಟ್, 12ನೇ ಪಡೆ, ಕ.ರಾ.ಮೀ.ಪೊ, ತುಮಕೂರು ಹೀಗೆ ಎಲ್ಲಾ 07 ಪಡೆಗಳಲ್ಲೂ ಮಹಿಳಾ ಸಿಬ್ಬಂದಿ ಬಲದ ಮಂಜೂರಾತಿ ಇರುವುದಿಲ್ಲವಾದ್ದರಿಂದ, ಗಲಭೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹಾಲಿ ಇರುವ 2ನೇ ಪಡೆ, ಕ.ರಾ.ಮೀ.ಪೊ, ಬೆಳಗಾವಿ ಮತ್ತು 4ನೇ ಪಡೆ, ಕ.ರಾ.ಮೀ.ಪೊ, ಬೆಂಗಳೂರು ಘಟಕಗಳಿಂದ ಇತರ ಜಿಲ್ಲೆಗಳಿಗೆ ಮಹಿಳಾ ಸಿಬ್ಬಂದಿಗಳನ್ನು ನಿಯೋಜಿಸಿದಾಗ ಉಂಟಾಗುವ ಪ್ರಯಾಣದ ಅಂತರವನ್ನು ಕಡಿಮೆ ಮಾಡಿ ಸೂಕ್ತ ಸಮಯದಲ್ಲಿ ಗಲಭೆ ನಿಯಂತ್ರಣಕ್ಕೆ ತರಲು, ಸದರಿ ಪಡೆಗಳಲ್ಲಿನ ಮಂಜೂರಾತಿ ಬಲದಿಂದ ಅನುಬಂಧದಲ್ಲಿ ವಿವರಿಸಿರುವಂತೆ 07-ಸ್ಪೆ.ಆರ್.ಪಿ.ಐ. (07 ಪಡೆಗಳಿಂದ ತಲಾ-01), 28-ಸ್ಪೆ.ಆರ್.ಎಸ್.ಐ. (07 ಪಡೆಗಳಿಂದ ತಲಾ-04), 84-ಸ್ಪೆ.ಎ.ಆರ್.ಎಸ್.ಐ. (07 ಪಡೆಗಳಿಂದ ತಲಾ-12), 252-ಸ್ಪೆ.ಆರ್.ಹೆಚ್.ಸಿ. (07 ಪಡೆಗಳಿಂದ ತಲಾ-36), 532-ಸ್ಪೆ.ಆರ್.ಪಿ.ಸಿ. (07 ಪಡೆಗಳಿಂದ ತಲಾ-76) ಮತ್ತು 84-ಅನುಯಾಯಿ (07 ಪಡೆಗಳಿಂದ ತಲಾ-12) ಹುದ್ದೆಗಳನ್ನು "ಮಹಿಳೆ" ಎಂದು ವರ್ಗೀಕರಿಸಿ ಆದೇಶ ಹೊರಡಿಸುವಂತೆ ಕೋರಿ, ಸದರಿ ಪ್ರಸ್ತಾವನೆಯಿಂದಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲವಾದ್ದರಿಂದ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಘಟಕದ ಅಧೀನದಲ್ಲಿ ಕಾರ್ಯನಿರ್ವಹಿಸಲು 07 ಪಡೆಗಳಲ್ಲಿ ಮಹಿಳಾ ಕಂಪನಿಗಳನ್ನು ಸೃಜಿಸಲು ಅನುವಾಗುವಂತೆ ಮಂಜೂರಾತಿ ಬಲದಲ್ಲಿ ವಿವರಿಸಿರುವಂತೆ, ಸ್ಪೆ.ಆರ್.ಪಿ.ಐ. ಹುದ್ದೆಯಿಂದ ಅನುಯಾಯಿ ಹುದ್ದೆಯವರೆಗೆ ಒಟ್ಟು ವಿವಿಧ ವೃಂದದ 987 ಹುದ್ದೆಗಳನ್ನು "ಮಹಿಳೆ" ಎಂದು ವರ್ಗೀಕರಿಸಿ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 08 ಪಿಓಪಿ 2025,**

**ಬೆಂಗಳೂರು, ದಿನಾಂಕ: 09/ಮೇ/2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಮಾಂಡೆಂಟ್, 5ನೇಪಡೆ, ಕ,ರಾ.ಮೀ.ಪೊ, ಮೈಸೂರು ಮತ್ತು ಕಮಾಂಡೆಂಟ್, 6ನೇ ಪಡೆ, ಕ.ರಾ.ಮೀ.ಪೊ, ಕಲಬುರಗಿಯಲ್ಲಿರುವ ಕರ್ನಾಟಕ ರಾಜ್ಯ ಮೀಸಲು ಪಡೆಗಳಿಗೆ ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಕೆಳಕಂಡಂತೆ ಪ್ರತಿ ಪಡೆಗೆ ತಲಾ 141 ಹುದ್ದೆಗಳಂತೆ ಒಟ್ಟು 282 ಹುದ್ದೆಗಳನ್ನು "ಮಹಿಳೆ" ಎಂದು ವರ್ಗೀಕರಿಸಲು ಸಹಮತಿ ನೀಡಿ ಆದೇಶಿಸಿದೆ.

...3)

| ಕ್ರಮ ಸಂಖ್ಯೆ | ಹುದ್ದೆ | ಕಂಪನಿ ಸಂಖ್ಯಾ ಬಲ |
|---|---|---|
| 1. | ಮಹಿಳಾ ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ | 01 |
| 2. | ಮಹಿಳಾ ಸ್ಪೆಷಲ್ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ | 04 |
| 3. | ಮಹಿಳಾ ಸ್ಪೆಷಲ್ ರಿಸರ್ವ್ ಸಹಾಯಕ ಸಬ್-ಇನ್ಸ್‌ಪೆಕ್ಟರ್ | 12 |
| 4. | ಮಹಿಳಾ ಸ್ಪೆಷಲ್ ರಿಸರ್ವ್ ಹೆಡ್ ಕಾನ್ಸ್‌ಟೇಬಲ್ | 36 |
| 5. | ಮಹಿಳಾ ಸ್ಪೆಷಲ್ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ | 76 |
| 6. | ಅನುಯಾಯಿ | 12 |
| | ಒಟ್ಟು | 141 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 43 ವೆಚ್ಚ-11/2025, ದಿನಾಂಕ: 03/05/2025ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Vanaja K.N.

(ಕೆ.ಎನ್.ವನಜ) 9/5/25

ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

9/5/2025

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಆಡಿಟ್-II), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
4) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
6) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
7) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11 ಮತ್ತು ಜಿ.ಪಂ), ವಿಧಾನ ಸೌಧ, ಬೆಂಗಳೂರು.
9) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು), ವಿಧಾನಸೌಧ, ಬೆಂಗಳೂರು.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.